ಚಿತ್ರಕಲೆಯಲ್ಲಿ ತನ್ನನ್ನು ಗುರುತಿಸಿಕೊಂಡಿರುವ ಅಮೂಲ್ಯ ಪ್ರತಿಭೆ ಮಿಶಲ್ ಅಸದಿ. 8ನೇ ತರಗತಿ ವಿದ್ಯಾರ್ಥಿನಿ. ಮಕ್ಕಳ ಕಲರವ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ **'ನನ್ನ ನೆಚ್ಚಿನ ಆಟ'** ಚಿತ್ರಕ್ಕೆ ದ್ವಿತೀಯ ಬಹುಮಾನ ಪಡೆದಿರುತ್ತಾಳೆ. ಈ ಸ್ಪರ್ಧೆಯು **'ಮಕ್ಕಳ ಜೋಳಿಗೆ'** ವೆಬ್ ಸೈಟ್ ಮೂಲಕ ನಡೆದಿತ್ತು. ಉದಯವಾಣಿ ವತಿಯಿಂದ ಆರ್ಟಿಸ್ಟ್ ಫೋರಂ ಸಹಯೋಗದಲ್ಲಿ ಜರುಗಿದ ತಾಲೂಕು ಮಟ್ಟದ, **ಚಿನ್ನರ ಬಣ್ಣ ಚಿತ್ರ** ಕಲಾ ಸ್ಪರ್ಧೆಯಲ್ಲಿ ಹಿರಿಯರ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿರುತ್ತಾರೆ. ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭ, ನವಂಬರ್ 14ರ ಮಕ್ಕಳ ದಿನಾಚರಣೆಯಂದು ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆ(ರಿ), ಸಹಯೋಗದಲ್ಲಿ ನಡೆದ ರಾಜ್ಯಮಟ್ಟದ ಗದಗ ಚಿತ್ರಕಲೋತ್ಸವದಲ್ಲಿ ನೀಲಿ ವಿಭಾಗದಲ್ಲಿ (6ನೇ-8ನೇ ವರ್ಗ) ರಾಜ್ಯದ 75 ವಿದ್ಯಾರ್ಥಿಗಳಿಗೆ ಕೊಡಮಾಡುವ **"ಪುಟ್ಟ ಕಲಾವಿದೆ"** ಪ್ರಶಸ್ತಿಗೂ ಈಕೆ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ರಾಷ್ಟ್ರೀಯ ಮತದಾರರ ದಿನಾಚರಣೆಯ ಪ್ರಯುಕ್ತ ಉಡುಪಿ ಜಿಲ್ಲಾ ಮಟ್ಟದ **'ಬಿತ್ತಿ ಪತ್ರ'** ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.



ಶಾಲೆಯ 8ನೇ ತರಗತಿಯ ಹಸ್ನಾ ರ್ಝುವಾನ್ ಉದಯವಾಣಿ ವತಿಯಿಂದ ಆರ್ಟಿಸ್ಟ್ ಫೋರಂ ಸಹಯೋಗದಲ್ಲಿ ಜರುಗಿದ ತಾಲೂಕು ಮಟ್ಟದ, ಚಿನ್ನರ ಬಣ್ಣ ಚಿತ್ರ ಕಲಾ ಸ್ಪರ್ಧೆಯಲ್ಲಿ ಹಿರಿಯರ ವಿಭಾಗದಲ್ಲಿ ಸಮಾಧಾನಕರ ಪ್ರಶಸ್ತಿಗೆ ಪಾತ್ರರಾಗಿರುತ್ತಾರೆ.

## ಕಾರ್ಕಳ ಜ್ಞಾನಸುಧಾ ಶಾಲೆಯಲ್ಲಿ ಯಕ್ಷಗಾನ ಪ್ರದರ್ಶನ



ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆಯಲ್ಲಿ ಜ್ಞಾನಸುಧಾ **'ಯಕ್ಷೋತ್ಕರ್ಷ'** ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳಿಂದ **'ರಾಣಿ ಶಶಿಪ್ರಭಾ'** ಯಕ್ಷಗಾನವನ್ನು ಪ್ರದರ್ಶಿಸಲಾಯಿತು.



## ಶಿಕ್ಷಕ – ಪೋಷಕರ ಸಭೆ

ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಶಾಲೆ ಮತ್ತು ಪ್ರೌಢಶಾಲೆಯಲ್ಲಿ 5ನೇ ಮತ್ತು 8ನೇ ತರಗತಿಯ ಪೋಷಕ – ಶಿಕ್ಷಕರ ಸಭೆಯನ್ನು ದಿನಾಂಕ 25-02-2023ರಂದು ನಡೆಸಲಾಯಿತು. ವಿಶೇಷ ಅತಿಥಿಯಾಗಿ ಆಗಮಿಸಿದ ಡಾ. ಅಶೋಕ್ ಕಾಮತ್ ಉಪಪ್ರಾಂಶುಪಾಲರು ಡಯಟ್, ಉಡುಪಿ ಇವರು 5ನೇ ಮತ್ತು 8ನೇ ತರಗತಿಯ ಮೌಲ್ಯಾಂಕನದ ಬಗ್ಗೆ ಪರೀಕ್ಷಾ ಸಿದ್ಧತೆ, ವಿಧಾನಗಳ ಕುರಿತು ಮಾಹಿತಿಯನ್ನು ನೀಡಿದರು.




## ಶಾರದಾ ಪೂಜೆ




ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಶಾರದಾ ಪೂಜೆಯನ್ನು ಶ್ರದ್ಧಾ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ನಿರೂಪಿಸಿದ ಸಂಸ್ಕೃತ ಭಾಷಾ ಶಿಕ್ಷಕಿಯಾದ ಶ್ರೀಮತಿ ಜ್ಯೋತ್ಸ್ನಾ ಗಜಾನನ ಸಾತೆ ಅವರು ಭಜನೆಯ ಮಹತ್ವವನ್ನು ತಿಳಿಸುತ್ತಾ ಭಜನೆಯಿಂದ ನಮಗೆ ಸುಖ ಶಾಂತಿ ನೆಮ್ಮದಿ ಲಭಿಸುವುದೆಂದು ತಿಳಿಸಿದರು. ವಿದ್ಯಾರ್ಥಿಗಳು ಸಾಂಪ್ರದಾಯಿಕ ಉಡುಗೆಗಳನ್ನು ಧರಿಸಿದ್ದರು. ಸುಮಾರು ಒಂದು ಗಂಟೆಯ ಕಾಲ ವಿದ್ಯಾರ್ಥಿಗಳಿಂದ ಹಾಗೂ ಶಿಕ್ಷಕರಿಂದ ಭಜನಾ ಕಾರ್ಯಕ್ರಮ ನಡೆಯಿತು.

## ಮೆದುಳು ಜ್ವರದ ಬಗ್ಗೆ ಮಾಹಿತಿ

ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ನಡೆದ ಪೋಷಕರ ಸಭೆಯಲ್ಲಿ ಹಿರ್ಗಾನದ ಮೆಡಿಕಲ್ ಆಫೀಸರ್ ಆದ ಡಾ. ಶಮಾ ಶುಕ್ರು ಅವರು ಜಪಾನೀಸ್ ಎನ್ಸಫಲಿಟೀಸ್ ವ್ಯಾಕ್ಸಿನ್ ನೀಡುವುದರಿಂದ ಮೆದುಳು ಜ್ವರ ಬರದಂತೆ ಹೇಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬಹುದೆಂದು ಸಮಗ್ರ ಮಾಹಿತಿ ನೀಡಿದರು. ಅವರು ಈ ಜ್ವರ ಹಂದಿ, ದನ -ಕರುಗಳಿಗೆ, ಪಕ್ಷಿಗಳಿಗೆ ಕಚ್ಚಿದ ಸೊಳ್ಳೆ ಮನುಷ್ಯರಿಗೆ ಕಚ್ಚುವುದರಿಂದ ಬರುತ್ತದೆ ಎಂದು ತಿಳಿಸಿದರು.




## ಹಳೆ ವಿದ್ಯಾರ್ಥಿಯ ಗಿನ್ನೀಸ್ ರೆಕಾರ್ಡ್ ಸಾಧನೆ

ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಹಾಗೂ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಹಳೆ ವಿದ್ಯಾರ್ಥಿಯಾದ ವಿಘ್ನೇಶ್ ಅವರು ಗಿನ್ನೀಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ನೂತನ ದಾಖಲೆ ಮಾಡಿರುತ್ತಾರೆ. ಇವರು ಮೋಸ್ಟ್ ಬೋ ಸ್ಟಫ್ ಸ್ಟ್ರೇಕ್ಸ್ ಇನ್ ವನ್ ಮಿನಿಟ್‌ನಲ್ಲಿ ಗಿನ್ನೀಸ್ ವರ್ಲ್ಡ್ ರೆಕಾರ್ಡ್ ಮಾಡಿದ ಅಪ್ರತಿಮ ಸಾಧಕರಾಗಿದ್ದಾರೆ.



## ವಾರ್ಷಿಕ ಕ್ರೀಡಾಕೂಟ : 2022–23

### ಕಾರ್ಕಳ ಜ್ಞಾನಸುಧಾ



ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜಿನ ವಾರ್ಷಿಕ ಕ್ರೀಡಾಕೂಟವನ್ನು ಉಡುಪಿ ಜಿಲ್ಲಾ ಯುವ ಸಬಲೀಕರಣ ಹಾಗೂ ಕ್ರೀಡಾ ವಿಭಾಗದ ಉಪನಿರ್ದೇಶಕ ಡಾ. ರೋಷನ್ ಕುಮಾರ್ ಹಾಗೂ ಜಿಲ್ಲಾ ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ಅಧ್ಯಕ್ಷ ಶ್ರೀ ಜೀವನ್ ಕುಮಾರ್ ಶೆಟ್ಟಿ ಉಪಸ್ಥಿತಿಯಲ್ಲಿ ಬಲೂನ್ ಹಾರಿಸುವ ಮೂಲಕ ಉದ್ಘಾಟಿಸಲಾಯಿತು.



ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ಅಧ್ಯಕ್ಷ ಶ್ರೀ ಜೀವನ್ ಕುಮಾರ್ ಶೆಟ್ಟಿ ಜಿಲ್ಲೆಯಲ್ಲೇ ಗುಣ ಮಟ್ಟದ ಶಿಕ್ಷಣಕ್ಕೆ ಮಾದರಿಯಾದ ಸಂಸ್ಥೆ ಜ್ಞಾನಸುಧಾ ಆಗಿದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾರಣೀಕರ್ತರಾದ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿಯವರ ಕಾರ್ಯ ಶ್ಲಾಘನೀಯ ಎಂದು ಪ್ರಶಂಶಿಸಿದರು.

ಇನ್ನೋರ್ವ ಅತಿಥಿಯಾಗಿದ್ದ ಉಡುಪಿ ಜಿಲ್ಲಾ ಯುವ ಸಬಲೀಕರಣ ಹಾಗೂ ಕ್ರೀಡಾ ವಿಭಾಗದ ಉಪನಿರ್ದೇಶಕ ಡಾ. ರೋಷನ್ ಕುಮಾರ್ ಕ್ರೀಡೆಯು ವಿದ್ಯಾರ್ಥಿಗಳಲ್ಲಿರುವ ಒತ್ತಡ, ದುಗುಡ, ದುಮ್ಮಾನ ದೂರ ಮಾಡಿ, ಉತ್ಸಾಹದಿಂದ ಬೆಳೆಯಲು ಸಹಕಾರಿ. ಯಾವ ವಿದ್ಯಾರ್ಥಿ ಕ್ರೀಡೆ ಹಾಗೂ ಸಾಂಸ್ಕೃತಿಕವಾಗಿ ಗುರುತಿಸಿಕೊಳ್ಳುತ್ತಾರೋ ಆತನಿಗೆ ಸಮಾಜದ ಮುಖ್ಯ ವೇದಿಕೆ ಸಿಗಲು ಸಾಧ್ಯ ಎಂದರು.



### ಸಮಾರೋಪ




ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಸ.ಪ.ಪೂ. ಕಾಲೇಜು ಬೈಲೂರು ಇಲ್ಲಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಶ್ರೀ ಮಂಜುನಾಥ್ ಶೆಟ್ಟಿಯವರು ಭಾಗವಹಿಸಿ, ಸೋಲು–ಗೆಲುವು ಎಂಬುದು ಇರುವುದೇ. ಅದನ್ನು ಮೀರಿ ಕ್ರೀಡೆಯಲ್ಲಿ ಭಾಗವಹಿಸಿ ದೊರಕುವ ಅನುಭವವು ಅಮೂಲ್ಯವಾದುದು ಎಂದರು.





ವಿದ್ಯಾರ್ಥಿಗಳಾದ ಕಾರ್ತಿಕ್ ವೈ, ಸಂಜನಾ ಬೆಸ್ಕೂರು, ಸನ್ನಿಧಿ ವೈಯಕ್ತಿಕ ಓವರ್ ಆಲ್ ಚಾಂಪಿಯನ್ ಶಿಪ್ ಮುಡಿಗೇರಿಸಿಕೊಂಡರು.

### ಉಡುಪಿ ಜ್ಞಾನಸುಧಾ



ಗಣಿತನಗರ ಕ್ರೀಡಾಂಗಣದಲ್ಲಿ ಉಡುಪಿ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ವಾರ್ಷಿಕ ಕ್ರೀಡಾಕೂಟ ಸಂಭ್ರಮದಿಂದ ಜರುಗಿತು. ಈ ಕ್ರೀಡಾಕೂಟದ ಉದ್ಘಾಟಕರಾಗಿ ಆಗಮಿಸಿದ ಉದ್ಯಮಿ ಶ್ರೀ ಸಂತೋಷ್ ಡಿಸಿಲ್ವಾರವರು ಶಿಕ್ಷಣ ಎಂದರೆ ಕೇವಲ ಪಾಠ ಪ್ರವಚನಗಳಲ್ಲ, ವಿದ್ಯಾರ್ಥಿಯ ದೇಹ ಮನಸುಗಳನ್ನು ಒಂದುಗೂಡಿಸುವ ಜ್ಞಾನದ ಜೊತೆಗೆ ಆಟವು ಬಹು ಮುಖ್ಯ. ಆಗ ಮಾತ್ರ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೊಳ್ಳಲು ಸಾಧ್ಯ ಎಂದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಷ್ಟ್ರೀಯ ವಾಲಿಬಾಲ್ ಕ್ರೀಡಾಪಟು ಶ್ರೀ ಸುದೀಪ್ ಶೆಟ್ಟಿ. ಪರಿಶ್ರಮ, ಮುನ್ನುಗ್ಗುವ ಛಲವಿದ್ದರೆ ಕ್ರೀಡೆಯಲ್ಲಿ ಉತ್ತಮ ಭವಿಷ್ಯವಿದೆ. ಜೀವನದಲ್ಲಿ ಒತ್ತಡರಹಿತವಾಗಿರಲು ಕ್ರೀಡೆಗಳು ಸಹಕಾರಿಯಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಟ್ರಸ್ಟಿ ಅನಿಲ್ ಕುಮಾರ್ ಜೈನ್ ವಹಿಸಿದ್ದರು. ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸಿ.ಇ.ಒ. ಆಗಿರುವ ದಿನೇಶ್.ಎಂ.ಕೊಡವೂರು, ಉಡುಪಿ ಜ್ಞಾನಸುಧಾ ಪ.ಪೂ.ಕಾಲೇಜಿನ ಪ್ರಾಂಶುಪಾಲ ಗಣೇಶ್ ಶೆಟ್ಟಿ ಸಂಸ್ಥೆಯ ಪ್ರಮುಖರು ಉಪಸ್ಥಿತರಿದ್ದರು.

### ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಗಣಿತ ನಗರ




ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟವನ್ನು ದಿನಾಂಕ 15–12–2022ರಂದು ಉದ್ಘಾಟಿಸಿದ ಕಾರ್ಕಳದ ಡಿ.ವೈ.ಎಸ್.ಪಿ ಎಸ್ ವಿಜಯ್ ಪ್ರಸಾದ್ ಅವರು ನಮ್ಮ ವ್ಯಕ್ತಿತ್ವವನ್ನು ರೂಪಿಸಲು ಕ್ರೀಡೆಗಳು ಸಹಕಾರಿ ಎಂದು ಹೇಳಿದರು. ನಮ್ಮ ಜೀವನದಲ್ಲಿ ಏಳು ಬೀಳುಗಳಿವೆ ಆದರೆ ವಿದ್ಯಾರ್ಥಿಗಳು ಹೊಸ ಜೀವನಕ್ಕೆ ಕಾಲಿಡಲು ಶಿಸ್ತು ಬೇಕು ಓದಿನ ಜೊತೆ ಆಟಗಳನ್ನು ತಪಸ್ಸಿನಂತೆ ತಿಳಿದುಕೊಳ್ಳಬೇಕು. ನಮ್ಮ ಗುರಿ ತಲುಪಲು ನಾವು ಎಲ್ಲಾ ರೀತಿಯಲ್ಲು ಶ್ರಮಿಸಬೇಕು. ವಿದ್ಯಾರ್ಥಿಗಳು ಶಿಕ್ಷಕರಿಗೆ ಗೌರವ ನೀಡಬೇಕು. ವಿದ್ಯಾರ್ಥಿಗಳು ಒಳ್ಳೆಯ ರೀತಿಯಲ್ಲಿತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಕೆಟ್ಟ ಕೆಲಸಗಳಲ್ಲಿ ಭಾಗಿಯಾಗಬಾರದು, ಕಾನೂನುಗಳನ್ನು ಪಾಲಿಸಬೇಕು, ದುಶ್ಚಟಗಳಿಗೆ ಬಲಿಯಾಗಬಾರದೆಂದು ಕಿವಿ ಮಾತು ಹೇಳಿದರು. ಮುಖ್ಯ ಅತಿಥಿಗಳಾದ ಕಾರ್ಕಳ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಯ್ಯ ಜಿ ಅವರು ವಿದ್ಯಾರ್ಥಿಗಳು ತಮ್ಮ ಸಾಧನೆಯ ಕಡೆ ಗಮನ ಹರಿಸಬೇಕು. ಪಠ್ಯ ಪಠ್ಯೇತರ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಓದಿನಷ್ಟೇ ಕ್ರೀಡೆಯೂ ಮುಖ್ಯ ಎಂದರು. ಸಮಾರೋಪ ಸಮಾರಂಭವನ್ನು ಅಧ್ಯಕ್ಷತೆಯನ್ನು ವಹಿಸಿದಂತಹ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘದಅಧ್ಯಕ್ಷರಾದ ಶ್ರೀ ಆನಂದ ಪೂಜಾರಿಅವರು ಪಾಠದಜೊತೆಆಟವೂ ಮುಖ್ಯ, ವಿದ್ಯಾರ್ಥಿಗಳು ಸಮಾಜಮುಖಿ ಕೆಲಸ ಮಾಡಬೇಕು ಎಂಬ ಕಿವಿ ಮಾತುಕೊಟ್ಟರು. ವಿವಿಧ ಆಟೋಟಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

## ಜಿಲ್ಲಾ ಮಟ್ಟದ ಕ್ರೀಡಾಕೂಟದ ಆತಿಥ್ಯ



ಕರ್ನಾಟಕ ಸರಕಾರ ಪದವಿ ಪೂರ್ವ ಶಿಕ್ಷಣ ಇಲಾಖೆ, ರಜತಾದ್ರಿ ಮಣಿಪಾಲ, ಉಡುಪಿ ಮತ್ತು ಉಡುಪಿ ಜ್ಞಾನಸುಧಾ ಪದವಿ ಪೂರ್ವ ಕಾಲೇಜು ಇವರ ಸಂಯುಕ್ತ ಆಶ್ರಯದಲ್ಲಿ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣ ಅಜ್ಜರಕಾಡು ಉಡುಪಿ ಇಲ್ಲಿ 2022–23 ನೇ ಸಾಲಿನ ಉಡುಪಿ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು. ಈ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಉಡುಪಿಯ ಶಾಸಕರಾದ ರಘುಪತಿ ಭಟ್‌ರವರು ವಿದ್ಯಾರ್ಥಿ ದೆಸೆಯಲ್ಲಿ ಕ್ರೀಡಾ ಸ್ಫೂರ್ತಿಯನ್ನು ತುಂಬುವುದು ಅಗತ್ಯ. ಹೊಸತನದ ಚಿಂತನೆಯೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಕ್ರೀಡಾಕೂಟವನ್ನು ಹಮ್ಮಿಕೊಂಡಿರುವುದು ಅಭಿನಂದನಾರ್ಹ ಎಂದರು. ಈ ಕಾರ್ಯಕ್ರಮದಲ್ಲಿ ಮೈಸೂರು ಎಲೆಕ್ಟ್ರಿಕ್ ಇಂಡಸ್ಟ್ರೀಸ್ ಲಿಮಿಟೆಡ್ ಬೆಂಗಳೂರು ಇದರ ಅಧ್ಯಕ್ಷರಾದ ಉದಯ್ ಕುಮಾರ್ ಶೆಟ್ಟಿ, ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿ, ಕರ್ನಾಟಕ ರಾಜ್ಯ ಅಥ್ಲೆಟಿಕ್ ಸಂಸ್ಥೆ ಬೆಂಗಳೂರು ಇದರ ಕಾರ್ಯದರ್ಶಿಗಳಾದ ಎ.ರಾಜವೇಲು, ಉಡುಪಿ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲರಾದ ಗಣೇಶ್ ಶೆಟ್ಟಿ ಮತ್ತಿತರು ಉಪಸ್ಥಿತರಿದ್ದರು.

## ಕವನ

### ಕೇಪುಲ

ಗುಲಾಬಿದಾತ್ ಪೊರ್ಲು
ಮಲ್ಲಿಗೆದಾತ್ ಕಮ್ಮೆನ
ಚಮತಿಗೆದಾತ್ ಐಸಿರ
ಎನ್ನವತ್ತ್...

ರಂಗ್'ಡ್ ರೈಸುನ ಗೊಂಡೆ
ರಂಗ್ ರಂಗ್'ದ ಅಬ್ಬಲಿಗೆ
ಮರ್ದ್'ಗಾಪಿನ ತುಂಬೆ
ಅಂಚತ್ ಯಾನ್...

ಕಶಿಯಾಂಡ ದೇವೆರೆಗ್
ಕಾಟಾಂಡ ದೈವೊಲೆಗ್
ಒಸರ್ ಬತ್ತಿ ಉಗ್ಗೆಲ್'ಗ್
ಕೆಸರ್ ಕಂಡದ ದೇಸೆಗ್
ಎನ್ನ ಜಾಗ ತುಳುನಾಡ ಕೊಡಿ ರಂಗ್'ಡ್

**ರಚನೆ : ನಿಶ್ಮಿತಾ ಪಳ್ಳಿ**
ಆಂಗ್ಲ ಭಾಷಾ ಉಪನ್ಯಾಸಕರು

## 2022-23ನೇ ಸಾಲಿನ ಪದವಿಪೂರ್ವ ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ನಡೆದ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಸಾಧಕರು

### ರಾಷ್ಟ್ರ ಮತ್ತು ರಾಜ್ಯ ಮಟ್ಟಕ್ಕೆ ಆಯ್ಕೆ – ಜಂಪ್ ರೋಪ್ : ಐವರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ

**30 ಸೆಕೆಂಡ್ ಸ್ಪೀಡ್ ಜಂಪ್ ರೋಪ್‌ನಲ್ಲಿ**
**ರಾಷ್ಟ್ರ ಮಟ್ಟಕ್ಕೆ**



**ಕು.ಚಿನ್ಮಯಿ. ಎಸ್.ದೇಶಪಾಂಡೆ**
**ಪ್ರಥಮ ವಿಜ್ಞಾನ ವಿಭಾಗ**



**ವಿಶ್ವನಾಥ ಕೊಪ್ಪದ್**
**ದ್ವಿತೀಯ ವಿಜ್ಞಾನ ವಿಭಾಗ**

3ಮೀ.ಎಂಡೊರೆನ್ಸ್ ಜಂಪ್ ರೋಪ್‌ನಲ್ಲಿ



ವಿಘ್ನೇಶ್ ಭಟ್
ದ್ವಿತೀಯ ವಾಣಿಜ್ಯ ವಿಭಾಗ



ಮಾನ್ಯ ಎಂ.ಎ
ಪ್ರಥಮ ವಿಜ್ಞಾನ ವಿಭಾಗ



ಹರ್ಷ ಕೊರವರ್
ದ್ವಿತೀಯ ವಿಜ್ಞಾನ ವಿಭಾಗ

ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ನ್ಯಾಶನಲ್ ಪಿ.ಯು ಕಾಲೇಜು ಬಾರ್ಕೂರು ಇವರ ಜಂಟಿ ಆಶ್ರಯದಲ್ಲಿ ಉಡುಪಿ ಜಿಲ್ಲಾ ಮಟ್ಟದ ಜಂಪ್ ರೋಪ್ ಟೂರ್ನ್‌ಮೆಂಟ್ ನಡೆದಿತ್ತು.

### ಗುಡ್ಡಗಾಡು ಓಟ ಸ್ಪರ್ಧೆ : ಇಬ್ಬರು ರಾಜ್ಯ ಮಟ್ಟಕ್ಕೆ

**4ನೇ ಸ್ಥಾನ**



**ಕಾರ್ತಿಕ್ ವೈ**
**ಪ್ರಥಮ ವಿಜ್ಞಾನ ವಿಭಾಗ**

**6ನೇ ಸ್ಥಾನ**



**ಗಗನ್ ತುಳಸೀಧರ್**
**ದ್ವಿತೀಯ ವಿಜ್ಞಾನ ವಿಭಾಗ**

ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಶ್ರೀ ಮೂಕಾಂಬಿಕಾ ದೇವಳ ಪದವಿ ಪೂರ್ವ ಕಾಲೇಜು ಕೊಲ್ಲೂರು ಇವರ ಸಹಯೋಗದೊಂದಿಗೆ ಉಡುಪಿ ಜಿಲ್ಲಾ ಮಟ್ಟದ ಗುಡ್ಡಗಾಡು ಓಟದ ಸ್ಪರ್ಧೆ ನಡೆದಿತ್ತು.

### ಸಾಂಸ್ಕೃತಿಕ ಸ್ಪರ್ಧೆ : 3 ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ




**ಆತ್ಮೀಕಾ ಶೆಟ್ಟಿ**
ದ್ವಿತೀಯ ವಿಜ್ಞಾನ ವಿಭಾಗ
ಇಂಗ್ಲಿಷ್ ಆಶುಭಾಷಣ




**ಕು.ವೈಷ್ಣವಿ ಶೆಟ್ಟಿ**
ಪ್ರಥಮ ವಿಜ್ಞಾನ ವಿಭಾಗ
ಕನ್ನಡ ಚರ್ಚಾ ಸ್ಪರ್ಧೆ – ದ್ವಿತೀಯ




**ಕು.ತನ್ವಿ ಶೆಟ್ಟಿ**
ಪ್ರಥಮ ವಿಜ್ಞಾನ ವಿಭಾಗ
ಇಂಗ್ಲಿಷ್ ಆಶುಭಾಷಣ

ಪದವಿ ಪೂರ್ವ ಶಿಕ್ಷಣ ಇಲಾಖೆಯ ವತಿಯಿಂದ ಹಾಸನದ ಎಚ್.ಕೆ.ಎಸ್. ಮೈಸೂರು ವಿಭಾಗ ಮಟ್ಟದ ಅಂತರ್ ಕಾಲೇಜ್ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಗಣಿತನಗರದ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ 3 ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆಗೊಂಡಿದ್ದಾರೆ.

## ಮೌಲ್ಯ ಸುಧಾ

### ಸಂಸ್ಕೃತಿ – ಸಂಸ್ಕಾರ – ಸದ್ವಿಚಾರದಡಿ ನಡೆದು ಬರುತ್ತಿರುವ ತಿಂಗಳ ಮೌಲಿಕ ಕಾರ್ಯಕ್ರಮ ಸರಣಿ

**“ಬದುಕಿಗೆ ಉಸಿರನು ಇತ್ತವರು, ವ್ಯಾಖ್ಯಾನಕೆ ನಿಲುಕದ ಹೆತ್ತವರು”**




9 ತಿಂಗಳು ಹೊತ್ತು ತಿರುಗುವ ತಾಯಿ ಮಾತ್ರವಲ್ಲ, ಆ 9 ತಿಂಗಳ ಒಳಗಿನ ಬರುವಿಕೆಗೆ ಕಾದು ನಿಂತು ಸ್ವಾಗತ ಕೋರುವ ಅಪ್ಪ ಮಾತ್ರವಲ್ಲ, ನಂತರದ ಜೀವನದುದ್ದಕ್ಕೂ ನಿಮ್ಮನ್ನು ಹೃದಯದಲ್ಲಿಟ್ಟುಕೊಂಡು ಹೊತ್ತು ತಿರುಗುವ ಅಪ್ಪ–ಅಮ್ಮನನ್ನು ಆನಂದ ಭಾಷ್ಪವಲ್ಲದೆ ಬೇರೆ ರೀತಿ ಕಣ್ಣೀರು ಬರದ ಹಾಗೆ ನೋಡಿಕೊಳ್ಳಿ.

– **ಡಾ.ಸುಧಾಕರ್ ಶೆಟ್ಟಿ,** ಅಧ್ಯಕ್ಷರು
ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್(ರಿ.), ಗಣಿತನಗರ.

**“ವಿದ್ಯಾರ್ಥಿ ಜೀವನ : ಇರುವುದು, ಇರಬೇಕಾದದ್ದು”**




ಸಮಯ ಪ್ರಜ್ಞೆ, ಸಮಾಜ ಪ್ರಜ್ಞೆಯನ್ನು ನಿರ್ಲಕ್ಷಿಸಬಾರದು, ತಾಯ್ನೆಲ, ಜನ್ಮದಾತರನ್ನು ಕಡೆಗಣಿಸಬಾರದು, ವಿದ್ಯೆ ಕಲಿಸಿದ ಗುರುಗಳನ್ನು ಪೂಜ್ಯನೀಯವಾಗಿ ಕಾಣಬೇಕು. ಈ ಸಮಾಜ ನಮಗೆ ಎಲ್ಲವನ್ನು ಕೊಟ್ಟಿದೆ. ಅದಕ್ಕೆ ನಾವು ಸದಾ ಕೃತಜ್ಞರಾಗ ಬೇಕು. ಆಗಲೇ ಜೀವನ ಸಾರ್ಥಕ. ಇದೆಲ್ಲವೂ ವಿದ್ಯಾರ್ಥಿಯಲ್ಲಿ ಇರಬೇಕಾದ್ದು.

**ಶ್ರೀ ಶ್ರೀ ಶ್ರೀ ವೀರೇಶಾನಂದ ಸರಸ್ವತೀ ಸ್ವಾಮಿಜಿ**
ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ
ರಾಮಕೃಷ್ಣ ನಗರ, ತುಮಕೂರು




ಜ್ಞಾನಸುಧಾ **“ಯಕ್ಷೋತ್ಕರ್ಷ”** ಯಕ್ಷಗಾನ ಕೇಂದ್ರದ ಸದಸ್ಯರಿಂದ **“ಗುರು ದಕ್ಷಿಣೆ”** ಯಕ್ಷಗಾನ ನಡೆಯಿತು.

**“ಯುವಜನತೆ : ಭಾರತದ ಭವಿಷ್ಯ”**




ನಾವು ಏನನ್ನು ಕಲಿಯುತ್ತೇವೆ. ಅದನ್ನೇ ಸಮಾಜಕ್ಕೆ ನೀಡುತ್ತೇವೆ. ಯಾವುದೇ ಕೆಲಸ ಮಾಡುವಾಗ ಅದರಲ್ಲಿ ಏಕಾಗ್ರತೆ ಮುಖ್ಯ. ಏಕಾಗ್ರತೆಯಿಂದ ನಾವು ಪಡೆದ ಶಿಕ್ಷಣವು ನಮ್ಮನ್ನು ದೇಶದ ಅಗ್ರ ಗಣ್ಯ ವ್ಯಕ್ತಿಯನ್ನಾಗಿ ರೂಪಿಸುತ್ತದೆ

**ಶ್ರೀ ಮನೋಹರ್ ಪ್ರಸಾದ್**
ಹಿರಿಯ ಪತ್ರಕರ್ತರು, ಮಂಗಳೂರು.

**“ಜೀವನೋತ್ಸಾಹ ಮತ್ತು ಸಾಹಿತ್ಯ ಪ್ರಜ್ಞೆ”**




ಇಚಿದು ಜಗತ್ತು ತುಂಬಾ ವೇಗವಾಗಿ ಚಲಿಸುತ್ತಿದೆ. ನಾವು ಇಂದಿನ ತಿಳುವಳಿಕೆಯನ್ನು ಇಂದೇ ಮೈಗೂಡಿಸಿಕೊಳ್ಳುತ್ತಾ ಸಾಗಬೇಕು. ಪರಿಸ್ಥಿತಿಗೆ ತಕ್ಕಂತೆ ನಾವು ಬದಲಾಗಬೇಕು. ಜೊತೆಗೆ ಬದುಕಿನಲ್ಲಿ ಸಾಹಿತ್ಯ ಪ್ರಜ್ಞೆ ಇದ್ದಾಗ ಜೀವನೋತ್ಸಾಹ ತುಂಬಿ ತುಳುಕಿರುತ್ತದೆ.

**ಪ್ರೊ.ಬಾಲಕೃಷ್ಣ ಶೆಟ್ಟಿ,**
ಪ್ರಾಂಶುಪಾಲರು, ರಾಮಕೃಷ್ಣ ಪದವಿ ಕಾಲೇಜು, ಮಂಗಳೂರು.

**“ನನ್ನ ಏಳಿಗೆಗೆ ನಾನೇ ಶಿಲ್ಪಿ”**




ಕಾರ್ಯದ ಬದ್ಧತೆ, ಗುರಿಯ ಸ್ಪಷ್ಟತೆ, ಗೊಂದಲರಹಿತ ಮನಸ್ಥಿತಿ, ಏಕಾಗ್ರತೆ ಮತ್ತು ಚಾರಿತ್ರ್ಯ ವಿದ್ಯಾರ್ಥಿಯಲ್ಲಿ ಇದ್ದಾಗ ಕನಸು ನನಸುಗೊಳ್ಳಲು ಸಾಧ್ಯ.

**ಕು. ಅಕ್ಷಯ ಗೋಖಲೆ,** ಉಪನ್ಯಾಸಕರು, ಕಾರ್ಕಳ.

**“ಭಾರತೀಯ ಸಂತರ ಜೀವನ ಸಂದೇಶ”**




ದೇವರನ್ನು ಎಲ್ಲೂ ನಾವು ಹುಡುಕ ಬೇಕಿಲ್ಲ. ತಂದೆ, ತಾಯಿ, ಗುರು ನಮ್ಮ ಪಾಲಿನ ದೇವರು. ಯಾವುದನ್ನು ಮಾಡಬೇಡ ಎಂದಿದ್ದವೋ ಅದನ್ನು ಮಾಡ ಬೇಡ, ಯಾವುದನ್ನು ಮಾಡು ಅಂದಿದ್ದವೋ ಅದನ್ನೇ ಮಾಡು ಎನ್ನುತ್ತವೆ ಶಾಸ್ತ್ರಗಳು, ಸಂಹಿತೆಗಳು. ಇದನ್ನೇ ಭಾರತೀಯ ಸಂತರು ತಮ್ಮ ಜೀವನ ಸಂದೇಶಗಳ ಮೂಲಕ ತೋರಿಸಿಕೊಟ್ಟಿದ್ದಾರೆ.

**ಡಾ.ಗುರುರಾಜ್ ಎಸ್.ಪಿ,**
ಉಪನ್ಯಾಸಕರು, ಕಥಾ ಕೀರ್ತನಕಾರರು ಮಂಗಳೂರು.

**“ವ್ಯಸನಮುಕ್ತ ಭಾರತ ಮತ್ತು ಯುವ ಜನತೆ”**




ನಾವು ನೂರು ವರ್ಷ ಬದುಕಲಿಕ್ಕಿದೆ ಆ ಲೆಕ್ಕಾಚಾರವೇನಿಲ್ಲ. ನಾವು ಬದುಕುವಾಗ ಹೇಗೆ ಮತ್ತು ಅದ್ಯಾವ ರೀತಿಯಲ್ಲಿ ಬದುಕಬೇಕು ಎನ್ನುವುದು ಬಹಳ ಮುಖ್ಯ. ನಾವು ಹಾಕಿದ ಬಟ್ಟೆ, ಮೇಕಪ್ಪು, ಹೇರ್ ಸ್ಟೈಲ್‌ನಿಂದ ನಮ್ಮ ರೂಪವಲ್ಲ. ಬದಲಾಗಿ ಆಯಾ ದಿನದ ನಮ್ಮ ಪ್ರಾಮಾಣಿಕ ಕೆಲಸ, ಔದಾರ್ಯದ ಮಾತುಗಳು, ಸತ್ಕರ್ಮಗಳು, ಚಟುವಟಿಕೆಗಳು ಮಾತ್ರವೇ ಜೀವನಕ್ಕೆ ರೂಪ ಕೊಡುತ್ತದೆ.

**ಶ್ರೀ ವಿವೇಕ್ ವಿನ್ಸೆಂಟ್ ಪ್ಯಾಸ್**
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವ್ಯಸನ ಮುಕ್ತಿ ಮತ್ತು ಸಂಶೋಧನಾ ಕೇಂದ್ರದ ಯೋಜನಾ ನಿರ್ದೇಶಕರು

## ಜ್ಞಾನಸುಧಾ ಪ್ರತಿಭಾ ಪುರಸ್ಕಾರ 2022 (ದ್ವಿತೀಯ ಹಂತ)



ರೂ.66.67 ಲಕ್ಷ ದ್ವಿತೀಯ ಹಂತದ ಸ್ಕಾಲರ್‌ಶಿಪ್ ವಿತರಣೆ



ರಾಷ್ಟ್ರಮಟ್ಟದ ತ್ರೋಬಾಲ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿರುವ ಕು.ಸ್ವಾತಿ ಶೆಟ್ಟಿಯವರನ್ನು ಸನ್ಮಾನಿಸಲಾಯಿತು.



ಯಾವ ವಿದ್ಯಾರ್ಥಿ ತಂದೆ–ತಾಯಿಯನ್ನು ಗೌರವಿಸುತ್ತಾರೋ ಅವರು ಸಮಾಜದ ಉನ್ನತ ಸ್ಥಾನಕ್ಕೆ ಏರುತ್ತಾರೆ– ಕೆ. ನಿತ್ಯಾನಂದ ಪ್ರಭು

ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ನಡೆದ ದ್ವಿತೀಯ ಹಂತದ ಜ್ಞಾನಸುಧಾ ಪ್ರತಿಭಾ ಪುರಸ್ಕಾರ–2022ರ ಕಾರ್ಯಕ್ರಮದಲ್ಲಿ ರೂ.66.67 ಲಕ್ಷ ದ್ವಿತೀಯ ಹಂತದ ಸ್ಕಾಲರ್‌ಶಿಪ್ ವಿತರಿಸಲಾಯಿತು. ಇದೇ ಸಂದರ್ಭ 2022–2023ನೇ ಸಾಲಿನಲ್ಲಿ ಸಂಸ್ಥೆಯಿಂದ ಕ್ರೀಡೆಯಲ್ಲಿ ರಾಷ್ಟ್ರಮಟ್ಟದ ತ್ರೋಬಾಲ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿರುವ ಕು.ಸ್ವಾತಿ ಶೆಟ್ಟಿ ಹಾಗೂ ರಾಜ್ಯಮಟ್ಟಕ್ಕೆ ಆಯ್ಕೆಗೊಂಡ ಜ್ಞಾನಸುಧಾದ 22 ವಿದ್ಯಾರ್ಥಿಗಳನ್ನು ಮತ್ತು ಪ್ರಸ್ತುತ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದು ಎಸ್.ಎಸ್.ಎಲ್.ಸಿಯಲ್ಲಿ ಅತ್ಯುತ್ತಮ ಫಲಿತಾಂಶವನ್ನು ದಾಖಲಿಸಿಕೊಂಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಿ ಗೌರವಿಸಲಾಯಿತು. ಕ್ರೀಡೆಯಲ್ಲಿ ಸಂಸ್ಥೆಯನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯುವಲ್ಲಿ ಶ್ರಮಿಸಿದ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ಸೌಜನ್ಯ ಹೆಗ್ಡೆ, ಶ್ರೀ ಅರುಣ್ ಕುಮಾರ್ ಹಾಗೂ ಕಿರಣ್ ಕುಮಾರ್‌ರವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಖ್ಯಾತ ಲೆಕ್ಕ ಪರಿಶೋಧಕ ಕೆ. ನಿತ್ಯಾನಂದ ಪ್ರಭು ಮಾತನಾಡಿ ಯಾವ ವಿದ್ಯಾರ್ಥಿ ತಂದೆ–ತಾಯಿಯನ್ನು ಗೌರವಿಸುತ್ತಾರೋ ಅವರು ಸಮಾಜದ ಉನ್ನತ ಸ್ಥಾನಕ್ಕೆ ಏರುತ್ತಾರೆ. ಸಮಾಜ ಅವರನ್ನು ಗೌರವಿಸುತ್ತದೆ. ಅಂತಹ ಮಕ್ಕಳನ್ನು ಜ್ಞಾನಸುಧಾ ಶಿಕ್ಷಣ ಸಂಸ್ಥೆ ನೀಡುತ್ತಿರುವುದು ಖುಷಿಯ ಸಂಗತಿ ಎಂದರು. ಕಾರ್ಯಕ್ರಮದಲ್ಲಿ ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿ, ಟ್ರಸ್ಟಿಗಳಾದ ಶ್ರೀ ಗಣಪತಿ ಪೈ, ಶ್ರೀ ಅನಿಲ್ ಕುಮಾರ್ ಜೈನ್, ಜ್ಞಾನಸುಧಾ ತ್ರಿವಳಿ ಸಂಸ್ಥೆಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು.

## ರಾಷ್ಟ್ರೀಯ ಸೇವಾ ಯೋಜನೆ

### ವಾರ್ಷಿಕ ವಿಶೇಷ ಶಿಬಿರ




ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ರಾ.ಸೇ.ಯೋ. ಘಟಕದ ವಾರ್ಷಿಕ ವಿಶೇಷ ಶಿಬಿರವು ಕುಕ್ಕುಂದೂರಿನ ಶ್ರೀದುರ್ಗಾದೇವಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ 27.10.2022ರಿಂದ 02.11.2022ರವರೆಗೆ ನಡೆಯಿತು

### ಸ್ವಚ್ಛತಾ ಅಭಿಯಾನ




ಪರಶುರಾಮ ಥೀಮ್ ಪಾರ್ಕ್ ಉದ್ಘಾಟನಾ ಕಾರ್ಯಕ್ರಮದ ಅಂಗವಾಗಿ ನಡೆದ ಸ್ವಚ್ಛತಾ ಅಭಿಯಾನ ಕಾರ್ಯಕ್ರಮದಲಿ ್ಲಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ರಾ.ಸೇ.ಯೋ. ಘಟಕವು ಭಾಗವಹಿಸಿತು.

## 74ನೇ ಗಣರಾಜ್ಯೋತ್ಸವ ಸಂಭ್ರಮ



ಗಣಿತ ನಗರ ಕ್ಯಾಂಪಸ್‌ನಲ್ಲಿ 74ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಕೊಚ್ಚಿಯ ಐ.ಎನ್.ಎಸ್. ಶಾರದಾದ ಕಮಾಂಡರ್ ಅಶ್ವಿನ್.ಎಂ.ರಾವ್ ನೆರವೇರಿಸಿದರು.




ದೇಶದ ನಾಗರಿಕನಾಗಿ ಸ್ವಯಂ ಪ್ರೇರಣೆಯಿಂದ ಜವಾಬ್ದಾರಿಗಳನ್ನು ವಹಿಸಿಕೊಂಡು ದೇಶದ ಏಳಿಗೆಗೆ ಕೈ ಜೋಡಿಸಬೇಕು. ದೇಶ ಅಂದ್ರೆ ನಾವು, ನಾವು ಅಂದ್ರೆ ದೇಶ ಎಂಬ ಭಾವ ಮೊಳಗಬೇಕು. ನಾನು ಭಾರತೀಯ ಎಂಬ ಹೆಮ್ಮೆ ಗರ್ವ, ಅಭಿಮಾನ ಇರಬೇಕು.

**– ಕಮಾಂಡರ್ ಅಶ್ವಿನ್.ಎಂ.ರಾವ್**



**SHODHAN R HEGDE**-10th A



**SHRAVANI** 10th B

## ಅಂಬೇಡ್ಕರ್ ಜಯಂತಿ




ಗಣಿತನಗರ ಸಭಾಂಗಣದಲ್ಲಿ ಭಾರತರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯ ಪ್ರಯುಕ್ತ ಪುಷ್ಪ ನಮನ ಸಲ್ಲಿಸಲಾಯಿತು.



**TRISHA P SHETTY** 10th A



**BHAVISH SHETTY**
1Oth B

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಫ್ರಾನ್ಸಿಸ್ ಡಿ'ಸೋಜ**

ಅಡುಗೆ ಸಹಾಯಕರು, 'ನೈವೇದ್ಯ ಸುಧಾ'

ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳು, ಗಣಿತ ನಗರ

**ನಮ್ಮನ್ನಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ**

**ಜ್ಞಾನಸುಧಾ ಬಳಗ**

## ನನ್ನ ಅಜ್ಜಿ

ಕೊಡಲೇನು ಆಗಲಿಲ್ಲ ನಾ ನಿನಗೆ
ಆದರೆ ನೀ ಕೊಟ್ಟದ್ದು ಬಹಳಷ್ಟಿದೆ ನನ್ನೊಂದಿಗೆ
ಮುಸ್ಸಂಜೆಯ ಹೊತ್ತಿಗೆ ತೊಡೆಯಲ್ಲಿ ಕೂರಿಸಿಕೊಂಡೆ ನಿನ್ನೊಂದಿಗೆ
ಆ ನಿನ್ನ ಕಥೆಯ ಕೇಳಲು ನಿನ್ನ ತೊಡೆಯಿಲ್ಲ ನನ್ನೊಂದಿಗೆ
ಅಮ್ಮಾ ಎಂದು ಕರೆದಾಗ ಓ ಎಂದಿದ್ದು ನೀ
ಅಮ್ಮ ಬೈದಾಗ ಅಮ್ಮನಿಗೆ ಗದರಿದವಳು ನೀ
ನೀನಿಲ್ಲದೆ ಕಣ್ಣುಗಳಲ್ಲಿ ಕಣ್ಣೀರ ಧಾರೆ ಬಾರದು ಆದರೆ
ಅಂತರಂಗದಲ್ಲಿ ಕಣ್ಣೀರು ಹರಿಯುತ್ತಿದೆ ನದಿಯಾಗಿ
ನೀ ನಕ್ಷತ್ರಗಳಲ್ಲಿ ಸೇರಿದೆ ನಾ ಯಾವಾಗ ನಿನ್ನ ಗೂಡು ಸೇರಲಿ
ಅನುಭವ ಎನ್ನುವ ಎಣ್ಣೆಯ ಬಿಟ್ಟು ಬಾಳ ಬೆಳಗಿಸು ಬಾ ಅಜ್ಜಿ.

ರಚನೆ: **ಮಾನಸ ಆಚಾರ್ಯ,** 10 ನೇ ತರಗತಿ 'ಎ' ವಿಭಾಗ

## ಅಪ್ಪನೆಂಬ ಭರವಸೆ

ಅಪ್ಪನೆಂಬ ಭರವಸೆ
ಮಗಳು ಹುಟ್ಟಿದ ಕ್ಷಣದಲ್ಲಿ ಜಗತ್ತನ್ನೇ ಮರೆತ ಅಪ್ಪ
ಕಷ್ಟಗಳ ತೋರದೆ ಹೆಗಲಲ್ಲಿ ಮೆರೆಸಿದ ನನ್ನಪ್ಪ
ಮಗಳ ನಗುವ ಕಂಡು ಖುಷಿಪಟ್ಟವನಾತ
ಕೇಳಿದನ್ನೆಲ್ಲಾ ಕೊಡಿಸುವ ಪ್ರೀತಿ ಪಾತ್ರನಾತ
ಅತ್ತಾಗ ಸಂತೈಸಿ ತುತ್ತನಿಟ್ಟು ಉಣಿಸಿದಾತ
ಬೆಟ್ಟದೆತ್ತರದಷ್ಟು ಕಾಳಜಿ ತೋರುವಾತ
ಅಕ್ಕರೆಯಿಂದ ಸಾಕಿ ಸಲಹಿ ಬೆಳೆಸಿರುವೆ ನನ್ನ
ಎಂದಿಗೂ ಬಯಸುವೆ ನಿನ್ನ ಖುಷಿಯನ್ನ
ಕಣ್ಣಿಗೆ ಕಾಣದ ದೇವರು ಮೇಲಿದ್ದಾನೆ ಎಂದರೆ
ಕಣ್ಣಿಗೆ ಕಾಣುವ ದೇವರು ನಿನ್ನಲ್ಲವೇ ಅಪ್ಪ.....

**ರಚನೆ : ಸಿಂಚನಾ ಟಿ.ಆರ್, ಪಿ.ಸಿ.ಯಂ.ಸಿ. (KJS)**

## ಅಪ್ಪ ಅಮ್ಮನ ಅಕ್ಕರೆ

ಹುಟ್ಟಿದಾಗ ನನಗೆ ಗುರುತು ಕೊಟ್ಟವರು ನೀವು
ದೊಡ್ಡವಳಾದಾಗ ಅದೇ ಗುರುತನ್ನು ಉಳಿಸಿಕೊಳ್ಳಲು
ಬೆನ್ನು ತಟ್ಟಿದವರು ನೀವು...

ನಾನು ಸೋತೇ ಅಂತ ಅಂದುಕೊಂಡಾಗ
ನನಗೆ ಧೈರ್ಯ ತುಂಬಿದವರು ನೀವು
ನನ್ನಿಂದ ಏನೂ ಆಗದು ಎಂದು ಅಂದುಕೊಂಡಾಗ
ನೀನು ಸಾಧಿಸ ಬಲ್ಲೆ ಎಂದು ಅಂದವರು ನೀವು...

ಆಕಾಶದೆತ್ತರ ಏರುವುದಕ್ಕೆ ರೆಕ್ಕೆ ಕೊಟ್ಟವರು ನೀವು
ನನಗೆ ಗುರುತಿಸಿಕೊಳ್ಳುವುದಕ್ಕೆ ಸ್ವಾತಂತ್ರ್ಯ ಕೊಟ್ಟವರು ನೀವು
ಪರದೆ ಹಾಕಿ ನನ್ನಿಂದ ಕಷ್ಟಗಳನ್ನು ಮುಚ್ಚಿಟ್ಟವರು ನೀವು
ಕಾರಣ ಮಗಳ ಬದುಕು ಎಂದೆಂದೂ ಖುಷಿಯಿಂದ
ತುಂಬಿರಲಿ ಎಂದು ಬಯಸಿದವರು ನೀವು...

ನಿಮ್ಮ ಪ್ರೀತಿಯ ಕಡಲಲ್ಲಿ ಮುಳುಗಿರುವೆ ನಾನು
ಹೇಗೆ ತೀರಿಸಲಿ ನಿಮ್ಮ ಪ್ರೀತಿಯ ಋಣವನ್ನ
ನಿಮ್ಮ ಕನಸನ್ನ ಈಡೇರಿಸುವುದೇ ನನ್ನ ಜೀವನದ ಗುರಿ
ನಿಮ್ಮ ಹಾರೈಕೆಯೇ ನನ್ನ ಸಾಧನೆಗೆ ದಾರಿ...

ರಚನೆ : **ಸಂಜನಾ. ಪಿ,** ಪಿ.ಸಿ.ಎಂ.ಸಿ **(KJS)**

## ಭಾಗ್ಯವಂತರು

ಹಸಿವಿನಲ್ಲಿ ಜನ ಬಳಲುತ್ತಿರಲು;
ಆಹಾರದ ಭಾವಚಿತ್ರದ ಹಾರವ ತೊಡಿಸಿ
ಹಿಗ್ಗುವ ಜನರ ನಡುವೆ...
ಭಾವನೆಗಳಲ್ಲಿ ಹೊಟ್ಟೆ ತುಂಬಿಸುವ
ನಾವು ಭಾಗ್ಯವಂತರು....!

ಹಣದ ಅಮಲಿನಲ್ಲಿ ಜಗವ ಮರೆವ
ಜನರಿರಲು
ಗುಣವ ಮರೆಸುತ, ಮರೆತಂತೆ ಇರುವ
ನಾವು ಭಾಗ್ಯವಂತರು..!

ನೋವನ್ನು ನೋಡಿ ಖುಷಿ ಪಡೆವ
ವಿಕೃತ ಮನಗಳ ನಡುವೆ;
ನೋವನ್ನೇ ಖುಷಿಯಾಗಿ ಬದುಕುವ
ನಾವು ಭಾಗ್ಯವಂತರು..!

ನಾಳೆಯ ಕನಸಿಗೆ ಕತ್ತನ್ನು ಹಿಸುಕುವ
ಕ್ರೂರಿ, ಹೀನ "ಮಾನ"ವರ ನಡುವೆ;
ಇಚಿದಿನ ದಿನದ ಖುಷಿಯನ್ನು ಹಂಚುವ
ನಾವೇ ಭಾಗ್ಯವಂತರು..!

**ರಚನೆ : ಗಣೇಶ್‌ಪ್ರಸಾದ್**, ಜೀವಶಾಸ್ತ್ರ ಉಪನ್ಯಾಸಕರು



**SUKRUTH A CHINNUR**
1st PUC (KJS)



**SHREYA S SHETTY**
1st PUC (KJS)



**PRATHITH**
1st PUC (KJS)



**MAHATHVI G M**
1st PUC (KJS)

## ಜೆ.ಇ.ಇ.ಮೈನ್ (ಬಿ.ಆರ್ಕ್) ಇಬ್ಬರು ವಿದ್ಯಾರ್ಥಿಗಳಿಗೆ 99 ಪರ್ಸಂಟೈಲ್‌ಗಿಂತ ಅಧಿಕ ಅಂಕ 6 ವಿದ್ಯಾರ್ಥಿಗಳಿಗೆ 90ಕ್ಕಿಂತ ಅಧಿಕ ಪರ್ಸಂಟೈಲ್



**Shreekanth H**
99.6402022
Percentile



**Chaman D P**
99.3279810
Percentile



**Surya V**
96.6726137
Percentile



**Shreeram**
92.2271781
Percentile



**Akhil D. Naik**
92.2271781
Percentile



**Amogha S R**
91.8465656
Percentile

ರಾಷ್ಟ್ರಮಟ್ಟದಲ್ಲಿ ಎನ್.ಟಿ.ಎ. ನಡೆಸಿದ ಜೆ.ಇ.ಇ. ಮೈನ್ – ಬಿ.ಆರ್ಕ್ ಪರೀಕ್ಷೆಯಲ್ಲಿ ಗಣಿತನಗರ ಕಾರ್ಕಳ ಜ್ಞಾನಸುಧಾ ಪಿ.ಯು.ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು 99ಕ್ಕಿಂದ ಅಧಿಕ ಪರ್ಸಂಟೈಲ್, 6 ವಿದ್ಯಾರ್ಥಿಗಳು 90ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿರುತ್ತಾರೆ. ವಿದ್ಯಾರ್ಥಿಗಳಾದ ಶ್ರೀಕಾಂತ್ ಎಚ್. 99.6402022, ಚಮನ್ ಡಿ.ಪಿ. 99.3279810, ಸೂರ್ಯ ವಿ. 96.6726137, ಶ್ರೀ ರಾಮ್ ಗಜಾನನ ಪಟಗಾರ್ 92.2271781, ಅಖಿಲ್ ದಯಾನಂದ ನಾಯಕ್ 92.2271781 ಮತ್ತು ಅಮೋಘ ಎಸ್. ಆರ್. 91.8465656 ಪರ್ಸಂಟೈಲ್ ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಯನ್ನು ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಸುಧಾಕರ್ ಶೆಟ್ಟಿಯವರು ಅಭಿನಂದಿಸಿದ್ದಾರೆ.

## ಸಂಪಾದಕೀಯ

**ಪ್ರಿಯ ಓದುಗ,**

**ಕವಿ ಕೆ.ಸಿ.ಶಿವಪ್ಪನವರು ತಮ್ಮ ಚೌಪದಿಗಳೊಂದರಲ್ಲಿ ಹೀಗನ್ನುತ್ತಾರೆ "ಕಲಿಸೆನಗೆ ಓ ಗುರುವೆ ಮರುಗುವುದ ಮಣಿಯುವುದ ಪರರ ಸುಖಿಗೆ ಹಿಗ್ಗುವುದ, ನೋವನಳಿಸುವುದ ಬೀಗದಿಹ ಮನವೊಂದ, ಸರಳತೆಯ ನೀಡೆನಗೆ ಮನ್ನಿಸೈ ತಪ್ಪುಗಳ ಮುದ್ದುರಾಮ" ತನ್ನೂರಿನ ಜನರ ಆರೋಗ್ಯದ ಬಗ್ಗೆ ಅಪಾರ ಕಾಳಜಿ ಹೊಂದಿರುವ ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ಇತ್ತೀಚೆಗೆ ಅಜೆಕಾರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತುರ್ತು ಸೇವೆಗೆ ನೆರವಾಗುವ ನಿಟ್ಟಿನಲ್ಲಿ ಆಂಬುಲೆನ್ಸ್ ಅನ್ನು ಒದಗಿಸಿತು. ಇದೊಂದು ಹೃದಯ ಸ್ಪರ್ಶಿ ಕಾರ್ಯಕ್ರಮವಾಗಿತ್ತು.**

**ಇನ್ನುಳಿದಂತೆ ಈ ಸಂಚಿಕೆಯಲ್ಲಿ ನಮ್ಮ ಸಂಸ್ಥೆಯ ಸಾಧಕ ವಿದ್ಯಾರ್ಥಿಗಳದ್ದೇ ಪಾರುಪತ್ಯ. ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿರಲಿ, ರಾಜ್ಯ ಮಟ್ಟದ ಇಲಾಖಾ ಪರೀಕ್ಷೆಗಳಿರಲಿ, "ಜ್ಞಾನಸುಧಾ"ದ ಕೀರ್ತಿಯನ್ನು ಎತ್ತಿ ಹಿಡಿಯುವಲ್ಲಿ ವಿದ್ಯಾರ್ಥಿಗಳು ಯಶಸ್ವಿಯಾಗಿದ್ದಾರೆ. ಇಂತಹ ಸಾಧನೆಗಳಿಗೆ ಸ್ಫೂರ್ತಿ ನೀಡುವವರು ನಮ್ಮ ಅಧ್ಯಕ್ಷರು ಹಾಗೂ ಅವರ ಜೊತೆಗಿರುವ ಬೋಧಕ ಹಾಗೂ ಬೋಧಕೇತರ ವೃಂದ. ಇವೆಲ್ಲಕ್ಕಿಂತ ಮಿಗಿಲಾಗಿ ನಮ್ಮ ಸಂಸ್ಥೆಯ ಆವರಣದಲ್ಲಿ ಹತ್ತು ವರ್ಷಗಳ ಹಿಂದೆ ಪ್ರತಿಷ್ಠಾಪಿಸಲಾದ "ಗಣಿತನಗರ ಶ್ರೀ ಮಹಾಗಣಪತಿ ಹಾಗೂ ನಾಗದೇವರ" ಕೃಪಾಶೀರ್ವಾದ. ಇವರೆಲ್ಲರ ಆಶೀರ್ವಾದ ನಮ್ಮನ್ನು ಸದಾ ಮುನ್ನಡೆಸುತ್ತಿರಲಿ, ಶಿಕ್ಷಣದಲ್ಲಿ ಉನ್ನತ ಪ್ರಗತಿಯೊಂದಿಗೆ, ಸಮಾಜದ ನೋವುಗಳಿಗೆ ಸ್ಪಂದಿಸುವ ಶಕ್ತಿಯನ್ನು ದೇವರು ನೀಡಲಿ ಎನ್ನುವ ಕೋರಿಕೆ ನಮ್ಮದು.**

**ಸಂಪಾದಕರು**

'ಜ್ಞಾನಸುಧಾ' ಪತ್ರಿಕೆ, ಗಣಿತ ನಗರ, ಕುಕ್ಕುಂದೂರು
ಕಾರ್ಕಳ – 575117, ಉಡುಪಿ ಜಿಲ್ಲೆ

ಸಂದೇಶ
<JNANASUDHA><NAME><PLACE>
<MESSAGE>
to
9019736528

Ph: 08258-298455, 298655
Email:jnanasudha@gmail.com

**'ನಹಿ ಜ್ಞಾನೇನ ಸದೃಶಂ' – ಜ್ಞಾನಸುಧಾದ ನಡಿಗೆ ಜ್ಞಾನದೆಡೆಗೆ**

Printed & Published by AJEKAR PADMA GOPAL EDUCATION TRUST, 'Padma Gopal', Joduraste, Karkala - 576 117
Editorial Board : Principal, KJSPUC & KJSEMHS, Mrs. Jyothi Padmanabha, Mr. Manjunath. *Designed* @ RAJ Graphics, Hirebettu
Editorial Office : KARKALA JNANASUDHA P.U. COLLEGE, GANIT NAGAR, KUKKUNDOOR, KARKALA - 576 117, Email : jnanasudha@gmail.com Ph: 08258-298455, 298655

# 45 STUDENTS WHO HAVE SCORED 95 PERCENTILE AND ABOVE IN JEE - MAIN -2023




## ಸಿ.ಎ ಫೌಂಡೇಶನ್ ಫಲಿತಾಂಶ : ಜ್ಞಾನಸುಧಾದ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ ಸಾತ್ವಿಕ್ ಪ್ರಭುವಿಗೆ 400ರಲ್ಲಿ 342 ಅಂಕ


ಸಾತ್ವಿಕ್ ಪ್ರಭು ರಶ್ಮಿತಾ ಶೆಟ್ಟಿ ಶೆಟ್ಟಿ ಪ್ರಿತೇಶ್ ರಾಹುಲ್ ಛಾಯಾ ಸಿ.ಪೈ. ಶ್ರೀನಿಧಿ ಭಟ್

ಇನ್ಸ್ಟಿಟ್ಯೂಟ್ ಆಫ್ ಚಾರ್ಟಡ್ ಎಕೌಂಟೆಂಟ್ಸ್ ಆಫ್ ಇಂಡಿಯಾ ರಾಷ್ಟ್ರಮಟ್ಟದಲ್ಲಿ ನಡೆಸುವ ಸಿಎ ಫೌಂಡೇಶನ್ ಪರೀಕ್ಷೆಯಲ್ಲಿ ಜ್ಞಾನಸುಧಾದ ವಾಣಿಜ್ಯ ವಿಭಾಗದ 6 ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳೊಂದಿಗೆ ತೇರ್ಗಡೆ ಹೊಂದುವ ಮೂಲಕ ಮುಂದಿನ ಸಿಎ ಇಂಟರ್ ಮಿಡಿಯೆಟ್ ಹಂತಕ್ಕೆ ತೇರ್ಗಡೆ ಹೊಂದಿದ್ದಾರೆ. ವಿದ್ಯಾರ್ಥಿಗಳಾದ ಸಾತ್ವಿಕ್ ಪ್ರಭು (342/400), ರಶ್ಮಿತಾ (234/400), ಶೆಟ್ಟಿ ಪ್ರೀತೇಶ್ (227/400), ರಾಹುಲ್ (216/400), ಛಾಯ.ಸಿ.ಪೈ (215/400), ಶ್ರೀನಿಧಿ ಭಟ್(200/400) ಅಂಕ ಗಳಿಸಿರುತ್ತಾರೆ. ಸಂಸ್ಥೆಯಿಂದ 15 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಸಾಧಕ ವಿದ್ಯಾರ್ಥಿಗಳನ್ನು ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷರಾದ ಡಾ.ಸುಧಾಕರ್ ಶೆಟ್ಟಿಯವರು ಅಭಿನಂದಿಸಿದ್ದಾರೆ.

## ಆಡಳಿತ ಮಂಡಳಿ ಸಭೆ –2022




ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವಾರ್ಷಿಕ ಮಂಡಳಿ ಸಭೆಯು ಅಕ್ಟೋಬರ್ 23, 2022ರಂದು ಟ್ರಸ್ಟಿನ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿಯವರ ನೇತೃತ್ವದಲ್ಲಿ ಜರುಗಿತು. ಈ ಸಂದರ್ಭ ಕಾರ್ಕಳ ಜ್ಞಾನಸುಧಾ ಪಿಯು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ.ಕೊಡವೂರ್‌ರವರನ್ನು ಗಣಿತನಗರ ಕ್ಯಾಂಪಸ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಪದೋನ್ನತಿ ನೀಡಲಾಯಿತು. ಮಂಡಳಿ ಸಭೆಯಲ್ಲಿ ಟ್ರಸ್ಟಿಗಳಾದ ಶ್ರೀಮತಿ ವಿದ್ಯಾವತಿ ಸುಧಾಕರ್ ಶೆಟ್ಟಿ, ಶ್ರೀ ಅನಿಲ್ ಕುಮಾರ್ ಜೈನ್, ಶ್ರೀ ಎಂ.ಜಿ.ಗೌಡ್, ಆಡಳಿತ ಮಂಡಳಿ ಸದಸ್ಯರಾದ ಶ್ರೀ ಗಣಪತಿ ಪೈ, ಶ್ರೀ ಶಾಂತಿರಾಜ್ ಹೆಗ್ಡೆ, ಡಾ. ಪ್ರಕಾಶ್ ಶೆಣೈ, ಡಾ. ಗುರುಪ್ರಸಾದ್, ನಿವೃತ್ತ ಶಿಕ್ಷಕ ಕೆ. ಪಾಂಡುರಂಗ ನಾಯಕ್, ಉಡುಪಿ ಜ್ಞಾನಸುಧಾ ಪ್ರಾಂಶುಪಾಲ ಶ್ರೀ ಗಣೇಶ್ ಶೆಟ್ಟಿ, ಕಾರ್ಕಳ ಜ್ಞಾನಸುಧಾ ಅಂಗ್ಲ ಮಾಧ್ಯಮ ಪ್ರೌಢ ಶಾಲೆಯ ಪ್ರಾಂಶುಪಾಲೆ ಶ್ರೀಮತಿ ಉಷಾ ರಾವ್ ಯು, ಸಂಸ್ಥೆಯ ಮುಖ್ಯ ಲೆಕ್ಕಪರಿಶೋಧನಾಧಿಕಾರಿ ಕೆ. ನಿತ್ಯಾನಂದ ಪ್ರಭು, ಆಂತರಿಕ ಲೆಕ್ಕಪರಿಶೋಧನಾಧಿಕಾರಿ ಶ್ರೀ ವಿಘ್ನೇಶ್, ಕೌನ್ಸಿಲರ್ ಡಾ.ಪ್ರಸನ್ನ ಹೆಗ್ಡೆ, ಸಂಸ್ಥೆಯ ಹಿತೈಷಿಗಳಾದ ದೇವೇಂದ್ರ ನಾಯಕ್, ತ್ರಿವಿಕ್ರಮ ಕಿಣಿ ಸುಕುಮಾರ್ ಶೆಟ್ಟಿ, ಉಪಸ್ಥಿತರಿದ್ದರು.

## ಜ್ಞಾನಸುಧಾ ಬಳಗಕ್ಕಾಗಿ

ಯಾವುದೋ ಕನಸುಳ್ಳ ಕಣ್ಣಿಟ್ಟುಕೊಂಡು,
ಹೆತ್ತವರೊಟ್ಟಿಗಿಲ್ಲದ ನೋವುಳ್ಳ ಎದೆ
ಮಿಡಿತವಿಟ್ಟುಕೊಂಡು,
ನಿಮ್ಮ ನೆರವನರಸಿ ಬಂದೆಮಗೆ,
ಹೆತ್ತ ಕರುಳಿಗಿಂತ ಮಿಗಿಲಾಗಿ ಪ್ರೀತಿಸಿದ
ಜ್ಞಾನಸುಧಾ ಬಳಗಕ್ಕೆ ಧನ್ಯವಾದಗಳು.

ಜಗತ್ತಿನ ಪರಿವಿಲ್ಲದೆ ಬಂದವರಿಗೆ ಜಗದ
ಬೇರೊಂದು ಕೊನೆಯ
ಜನರೊಟ್ಟಿಗೆ ಬೆಸೆವುದ ಕಲಿಸಿದ,
ಜಗ ಮರೆತರೂ ಜಗವ ಕಾಣಲು ಜೀವಕೊಟ್ಟು
ತಂದೆ ತಾಯರ ಮರೆಯದಿರೆಂದು ಹೇಳಿದ
ಜೀವ ಬಿಟ್ಟರೂ ಕಾಯಕವೇ ಮೇಲೆಂದು
ತೋರಿಸಿದ ಜ್ಞಾನಸುಧಾ ಬಳಗಕ್ಕೆ
ಧನ್ಯವಾದಗಳು.

ಸ್ವಂತ ದೇಹ ನೊಂದರೂ ತನ್ನ ಕುಡಿಗಳ
ಮನವರಿತಂಥ
ಮಕ್ಕಳೇ ನನ್ನುಸಿರು ಎಂದು ಹೆತ್ತವರಂತೆಯೇ,
ತನ್ನೆಲ್ಲಾ ನೋವ ನುಂಗಿದಂತ,
ನಿಜವಾದ ಶ್ರಮಜೀವಿಗಳೊಂದಿಗೆ ನಂಟನ್ನು ಬೆಸೆವ
ಅವಕಾಶವವನ್ನ ಎಮಗಿತ್ತ
ಜ್ಞಾನಸುಧಾ ಬಳಗಕ್ಕೆ ಧನ್ಯವಾದಗಳು.

**ರಚನೆ : ಜ್ಞಾನಪದ್ಮ ವಿದ್ಯಾರ್ಥಿನಿಯರು**

# KARKALA JNANASUDHA ENGLISH MEDIUM HIGH SCHOOL
## 58 Students who got Distinction in SSLC Annual Examination – 2023




**SHRAVYA** S-125, K-100, Sc-100
**TRISHA A DEVADIGA** S-125, K-100, M-100
**ANVITHA NAYAK** M-100
**K VIGNESH KINI** E-125, H-100
**SNIGDHA U SHETTY** K-100
**ANVITHA R KAMATH** E-125
**SANVI** S-125, E-100
**STHUTHI NAYAK** S-125
**K MANOJ KAMATH**




**SAMANVITHA G NAYAK** S-125
**GAURAV NAYAK** M-100
**HARSHITH H SHETTY** E-125, H-100, S.Sc-100
**AAYUSH SHETTY**
**HRISHIKESH G MESTA** E-125
**LAKSHMIPRIYA** E-125
**VIDISHA V SHETTY**
**N B VIDWATH PRASAD JI**
**DEEPTHI D SALIAN**




**STHUTHI M RAO** H-100
**DEEPA D** H-100
**DEEPTHI D PUTHRAN**
**ADORA QUADRAS**
**N PRATHIKSHA HEGDE** H-100
**PRANAV P SHETTY**
**NAVAMI H SANIL**
**CHETHAN N ASANTAPUR** Eng – 125
**SHABARI SHETTY**




**SHIRISHA** E-100
**TRISHA S POOJARY** K-100, S.Sc–100
**SHRINIDHI**
**PRANAY MADA**
**PRANAV S NAYAK**
**ANANTHESH SHENOY** S-125
**DEEKSHA POOJARY**
**POORVITHA S KARKERA** S-125, K-100
**HARSHITH S M** E-125, H-100




**G SAHANA**
**PRAKHYATH MADA**
**HARSHIKA**
**RISHIKA Y POOJARY**
**SHRAVYA**
**MEERAL DMELLO**
**SANJANA U G**
**NAGPRASAD**
**RAHUL VARDHAN C N**




**AUSTIN S**
**AJAY D NAYAK**
**HUDA HAMRA**
**ADITHI S** S-125
**KARTHIK PRABHU**
**PRERANA SUNIL KUMAR**
**PRASIDHI UDAY**
**DISHA N POOJARY**
**SHRAVITH**




**HRISHIKESH S SHETTY**
**ANNMARIA**
**THRISHANYA SHETTY**
**ADITHYA MANJITHAYA**




**JAI KISHAN V J**
10TH A



**MANASA B ACHARYA**
10th A



**RANJAN UG**
22 PCMB (UJS)



**SANIKA**
22 PCMB (UJS)

# ಜ್ಞಾನ ಸಂಭ್ರಮ – 2022

## ಕಾರ್ಕಳ ಜ್ಞಾನಸುಧಾ, ಗಣಿತನಗರ




**ಜ್ಞಾನಸುಧಾ ಪದವಿಪೂರ್ವ ಕಾಲೇಜಿನ ವಾರ್ಷಿಕೋತ್ಸವ 'ಜ್ಞಾನ ಸಂಭ್ರಮ' ಉದ್ಘಾಟನೆಯ ಸಂದರ್ಭ ಉಡುಪಿಯ ಹಿರಿಯ ನ್ಯಾಯವಾದಿ, ಎ.ಎಸ್.ಎನ್.ಹೆಬ್ಬಾರ್, ಮಂಗಳೂರು ವಿ.ವಿ.ಯ ರಸಾಯನ ಶಾಸ್ತ್ರ ವಿಭಾಗದ ಪ್ರೊಫೆಸರ್, ಡಾ. ವಿಶಾಲಾಕ್ಷಿ ಬಿ. ಉಪಸ್ಥಿತರಿದ್ದರು.**

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಉಡುಪಿಯ ಹಿರಿಯ ನ್ಯಾಯವಾದಿ ಎ.ಎಸ್.ಎನ್.ಹೆಬ್ಬಾರ್ ವೈದ್ಯರು ಹಾಗೂ ವಕೀಲರ ವೃತ್ತಿಗೆ ನಿವೃತ್ತಿ ಎಂಬುದಿಲ್ಲ. ಕಾಲಕಾಲಕ್ಕೆ ಕಾನೂನು–ಕಾಯಿದೆಗಳು ಬದಲಾಗುತ್ತಿರುತ್ತದೆ. ಹೊಸ–ಹೊಸ ರೋಗಗಳು ಉಲ್ಬಣಿಸಿದಂತೆ ನವೀನ ಆಲೋಚನೆಗಳಿಗೆ ನಮ್ಮನ್ನು ತೊಡಗಿಸಿಕೊಳ್ಳಬೇಕು, ಪರಿಹಾರ ಕಂಡುಕೊಳ್ಳ ಬೇಕಾದದ್ದು ಅಗತ್ಯವಾಗಿದೆ. ಜ್ಞಾನದ ಆಗರದ ಸಾರಸ್ವತ ನೆಲ ನಮ್ಮದು. ನಾಡು ನುಡಿಯ ಬಗ್ಗೆ ನಮಗೆ ಹೆಮ್ಮೆ ಇರಬೇಕು ಎಂದ ಅವರು ಭಾರತ ವಿಶ್ವಕ್ಕೆ ನೀಡಿದ ಕೊಡುಗೆಯ ಬಗ್ಗೆ ನಾವು ಸದಾ ಋಣಿಯಾಗಿರಬೇಕು. ಬದುಕಿಗೆ ಫೈನಲ್ ಎಂಬುದು ಇಲ್ಲ ಎಂದರು.




**ಬದುಕಿಗೆ ಫೈನಲ್ ಎಂಬುದು ಇಲ್ಲ – ಎ.ಎಸ್.ಎನ್.ಹೆಬ್ಬಾರ್**




**ಜ್ಞಾನಸುಧಾದ ಬದ್ಧತೆಯ ಕಾರ್ಯವೈಖರಿ ಅಭಿನಂದನೀಯ – ಡಾ. ವಿಶಾಲಾಕ್ಷಿ ಬಿ.**

ಕಾರ್ಯಕ್ರಮದಲ್ಲಿ ಗುರುವಂದನೆಯನ್ನು ಸ್ವೀಕರಿಸಿದ ಮಂಗಳೂರು ವಿ.ವಿ.ಯ ರಸಾಯನ ಶಾಸ್ತ್ರ ವಿಭಾಗದ ಪ್ರೊಫೆಸರ್ ಡಾ. ವಿಶಾಲಾಕ್ಷಿ .ಬಿ. ಯವರು ಮಾತನಾಡಿ, ಜ್ಞಾನದ, ವಿಜ್ಞಾನದ ಹೊಸ ಸಂಶೋಧನೆಯಲ್ಲಿ ನಮ್ಮನ್ನು ಪಳಗಿಸಬೇಕು. ರಾಷ್ಟ್ರ ಮೊದಲು ಅನ್ನುವುದರ ಜೊತೆಗೆ ಚಾರಿತ್ರ್ಯವಂತ ಗುಣವನ್ನು ಹೊಂದಿದ ಘನತೆ ಗೌರವದ ಮನ ವಿದ್ಯಾರ್ಥಿಗಳಲ್ಲಿ ಹೊರಹೊಮ್ಮಬೇಕು. ಹವ್ಯಾಸವು ಆಸಕ್ತಿಯಾದಾಗ ನಮ್ಮ ಕಾರ್ಯವು ಯಶಸ್ವಿಯಾಗಲು ಸಾಧ್ಯ. ಪ್ರಾಮಾಣಿಕ ಹಾಗೂ ದಕ್ಷ ಉಪನ್ಯಾಸಕರ ದುಡಿಮೆಯಿಂದ ವಿದ್ಯಾರ್ಥಿಗಳನ್ನು ಅತ್ಯುತ್ತಮ ಸ್ಥಾನಗಳಿಗೆ ಕಳುಹಿಸುತ್ತಿರುವ ಜ್ಞಾನಸುಧಾದ ಬದ್ಧತೆಯ ಕಾರ್ಯವೈಖರಿ ಅಭಿನಂದನೀಯ ಎಂದರು.

ಇದೇ ಸಂದರ್ಭ 2021–22ನೇ ಸಾಲಿನ ಶೈಕ್ಷಣಿಕ ಕ್ಷೇತ್ರದ ಸಾಧಕರನ್ನು ಹಾಗೂ 2022–23ನೇ ಸಾಲಿನ ರಾಷ್ಟ್ರ ಮತ್ತು ರಾಜ್ಯಮಟ್ಟಕ್ಕೆ ಆಯ್ಕೆಗೊಂಡ 26 ಸಾಧಕ ಕ್ರೀಡಾಪಟುಗಳನ್ನು ಹಾಗೂ ಮೂವರು ಸಾಂಸ್ಕೃತಿಕ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

### ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ




ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಗಣಿತನಗರ ಕ್ರೀಡಾಂಗಣದಲ್ಲಿ ನಡೆದ 2022–23ನೇ ಸಾಲಿನ ವಾರ್ಷಿಕ ಸಾಂಸ್ಕೃತಿಕ ಉತ್ಸವ 'ಜ್ಞಾನ ಸಂಭ್ರಮ–2022'ನ್ನು ಹಿರಿಯರಾದ ಶ್ರೀ ದೇಜು ಮೈಂದನ್ ಕೊಡವೂರ್ ದೀಪ ಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು. ನಂತರ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.

## ಉಡುಪಿ ಜ್ಞಾನಸುಧಾ, ನಾಗಬನ ಕ್ಯಾಂಪಸ್




ಉಡುಪಿ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ವರ್ಷದ ವಾರ್ಷಿಕೋತ್ಸವ "ಜ್ಞಾನಸಂಭ್ರಮ"ವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಮೆಲಕ ಮಣಿಪಾಲ್ ಮೆಡಿಕಲ್ ಕಾಲೇಜಿನ ಡೀನ್ ಹಾಗೂ ಬಯೋಕೆಮಿಸ್ಟ್ರಿ ಪ್ರೊಫೆಸರ್ ಡಾ.ಉಲ್ಲಾಸ್ ಕಾಮತ್ ಇವರು ಮಾತನಾಡಿ ವಿದ್ಯಾರ್ಥಿಗಳು ತಮ್ಮ ಗುರಿ ಸಾಧನೆಯಲ್ಲಿ ಸತತ, ಪ್ರಾಮಾಣಿಕ ಪ್ರಯತ್ನದಿಂದ ಮುಂದುವರಿದಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದರು. ಈ ಕಾರ್ಯಕ್ರಮದಲ್ಲಿ ಉಡುಪಿ ಕರಾವಳಿಯ ಭದ್ರತಾ ಪಡೆಯ ಪೋಲಿಸ್ ಇನ್ಸ್‌ಪೆಕ್ಟರ್ ಶ್ರೀ ಪ್ರಮೋದ್‌ಕುಮಾರ್ ಪಿ, ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿ, ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸಿ.ಇ.ಓ. ದಿನೇಶ್ ಎಂ ಕೊಡವೂರು, ಉಡುಪಿ ಜ್ಞಾನಸುಧಾ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲರಾದ ಗಣೇಶ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು.

## ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಗಣಿತ ನಗರ




ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಶಾಲೆ ಹಾಗೂ ಪ್ರೌಢ ಶಾಲೆಯಲ್ಲಿ 2022–23ನೇ ಸಾಲಿನ ವಾರ್ಷಿಕೋತ್ಸವವಾದ ಜ್ಞಾನಸಂಭ್ರಮವನ್ನು ಸಡಗರ ಸಂಭ್ರಮದಿಂದ ಆದರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ವಿ. ಸುನಿಲ್ ಕುಮಾರ್ ಅವರು ಜ್ಞಾನಸುಧಾ ಶಿಕ್ಷಣ ಸಂಸ್ಥೆಯು ಮಕ್ಕಳಲ್ಲಿ ಮೌಲ್ಯವನ್ನು ಬೆಳೆಸುವ ಕೆಲಸ ಮಾಡುತ್ತಿದೆ. ಮೌಲ್ಯಗಳು ಕುಸಿತವಾದರೆ ಸಮಾಜ ಬದುಕುವುದಿಲ್ಲ. ಪಠ್ಯ ಪುಸ್ತಕದಲ್ಲಿ ಸಿಗದಿರುವ ಶಿಕ್ಷಣ ಸಂಸ್ಥೆಗಳಲ್ಲಿ ಸಿಗಬೇಕು. ಮಕ್ಕಳಲ್ಲಿ ಆತ್ಮ ವಿಶ್ವಾಸ ರೂಡಿಸಿಕೊಳ್ಳುವ, ಮೌಲ್ಯಾಧಾರಿತ ನಡವಳಿಕೆಗೆ ಒತ್ತು ಕೊಡುವ ಶಿಕ್ಷಣ ನೀಡಬೇಕು ಎಂದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಕಾರ್ಕಳ ಹಿರಿಯ ನ್ಯಾಯವಾದಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ಎಮ್ ಕೆ ವಿಜಯ್ ಕುಮಾರ್ ಅವರು ಜ್ಞಾನಸುಧಾ ಕಾರ್ಕಳದ ಆಸ್ತಿ, ಜ್ಞಾನಸುಧಾದ ಆಸ್ತಿ ವಿದ್ಯಾರ್ಥಿಗಳು ಎಂದರು. ವಿದ್ಯಾರ್ಥಿಗಳು ಶಿಕ್ಷಕರಲ್ಲಿ ದೇವರನ್ನು ಕಾಣಬೇಕು ಎಂದು ಅವರು ಕಿವಿಮಾತು ಹೇಳಿದರು. ಅಜೆಕಾರು ಪದ್ಮ ಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಸುಧಾಕರ್ ಶೆಟ್ಟಿ ಅವರು ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಮಾಡುವ ಕೆಲಸ ಪೋಷಕರು ಹಾಗೂ ಶಿಕ್ಷಕರು ಮಾಡಬೇಕು. ಶಿಕ್ಷಕರು ತಮ್ಮ ಆತ್ಮಸಾಕ್ಷಿಗನುಗುಣವಾಗಿ ಕೆಲಸ ಮಾಡಬೇಕು ಎಂದರು. ಈ ಸಂಧರ್ಭದಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ವಿದ್ಯಾರ್ಥಿಗಳಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆದವು.



# ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಗಣಿತ ನಗರ

## 2022–23 ನೇ ಸಾಲಿನಲ್ಲಿ ಶಾಲಾ ಶಿಕ್ಷಣಾ ಮತ್ತು ಸಾಕ್ಷರತಾ ಇಲಾಖೆ ಹಾಗೂ ವಿವಿಧ ವಿದ್ಯಾ ಸಂಸ್ಥೆಗಳ ಜಂಟೀ ಆಶ್ರಯದಲ್ಲಿ ನಡೆದ ಅಥ್ಲೇಟಿಕ್ಸ್‌ನ ಕ್ರೀಡಾ ಸಾಧಕರು

### ಅಂತರಾಷ್ಟ್ರೀಯ ಮಟ್ಟಕ್ಕೆ ಆಯ್ಕೆ



**ಚದುರಂಗ :** ಚೆಸ್‌ನಲ್ಲಿ ಕಾಮನ್ ವೆಲ್ತ್‌ಯೂತ್ ಚೆಸ್ ಚಾಂಪಿಯನ್ ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಜ್ಞಾನಸುಧಾ ಚೆಸ್ ತಾರೆ ದಿಶಾ ಯು.ಎ. ಶ್ರೀಲಂಕಾದಲ್ಲಿ ನಡೆದ ಕಾಮನ್ ವೆಲ್ತ್ ಯೂತ್ ಚೆಸ್ ಚಾಂಪಿಯನ್ ಶಿಪ್–2022ರಲ್ಲಿ 9ನೇ ತರಗತಿ ವಿದ್ಯಾರ್ಥಿನಿ **ದಿಶಾ.ಯು.ಎ** ವಯೋಮಾನ 14ರ ಬಾಲಕಿಯರ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಿದ ಹೆಗ್ಗಳಿಕೆಗೆ ಪಾತ್ರಳಾಗಿದ್ದಾಳೆ. ಈಕೆ ಉಡುಪಿಯಲ್ಲಿ ನಡೆದ ಜಿಲ್ಲಾ ಮಟ್ಟದ ಸ್ಪರ್ಧೆಯಿಂದ ರಾಜ್ಯಮಟ್ಟಕ್ಕೆ ಆಯ್ಕೆಗೊಂಡು ನಂತರ ಕಾರವಾರದಲ್ಲಿ ಜರುಗಿದ ರಾಜ್ಯಮಟ್ಟದ 17ರ ವಯೋಮಾನದ ಚೆಸ್ ಪಂದ್ಯಾವಳಿಯಲ್ಲಿ ತೃತೀಯ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಗೊಂಡಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳ ಬಹುದು.

### ರಾಷ್ಟ್ರ ಮಟ್ಟಕ್ಕೆ ಆಯ್ಕೆ



**ತ್ರಿವಿದ ಜಿಗಿತ** : ಪ್ರೌಢಶಾಲೆಯ 17 ವರ್ಷ ವಯೋಮಿತಿಯ ಬಾಲಕರ ವಿಭಾಗದಲ್ಲಿ 10ನೇ ತರಗತಿಯ ಪ್ರಣಯ್ ಶೆಟ್ಟಿ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ 100 ಮೀ. ಓಟದಲ್ಲಿ, ಉದ್ದ ಜಿಗಿತ ಮತ್ತು ತ್ರಿವಿಧ ಜಿಗಿತದಲ್ಲಿ ಪ್ರಥಮ ಸ್ಥಾನಿಯಾಗಿ ಹಾಗೂ ತಾಲೂಕಿಗೆ ವೈಯಕ್ತಿಕ ಚಾಂಪಿಯನ್ ಆಗಿ ಹೊರಹೊಮ್ಮಿದ ಈತ ಮುಂದೆ ಉಡುಪಿ ಜಿಲ್ಲಾ ಮಟದ್ಟಲ್ಲಿ 100 ಮೀ. ಓಟದಲ್ಲಿ ಪ್ರಥಮ, ಉದ್ದ ಜಿಗಿತದಲ್ಲಿ ದ್ವಿತೀಯ, ತ್ರಿವಿಧ ಜಿಗಿತದಲ್ಲಿ ದ್ವಿತೀಯ ಸ್ಥಾನಿಯಾಗಿ ಬಾಲಕರ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್ ಆಗಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜರುಗಿದ ರಾಜ್ಯಮಟ್ಟದ ತ್ರಿವಿದ ಜಿಗಿತದಲ್ಲಿ ( 12.87ಮೀ.) ಸಾಧನೆಯೊಂದಿಗೆ ದ್ವಿತೀಯ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಗೊಂಡ ಸಂಸ್ಥೆಯ ಹೆಮ್ಮೆಯ ಕ್ರೀಡಾಪಟುವಾಗಿರುತ್ತಾರೆ.

ಪ್ರಣಯ್ ಸಾಧನೆಯನ್ನು ಗುರುತಿಸಿ ಸಂಸ್ಥೆಯ ಪೋಷಕರ ಸಭೆಯಲ್ಲಿ ಶಾಲೆಯ ವತಿಯಿಂದ ಸನ್ಮಾನಿಸಲಾಯಿತು.

### ರಾಜ್ಯಮಟ್ಟಕ್ಕೆ ಆಯ್ಕೆ



**ಚಕ್ರ ಎಸೆತ :** ಪ್ರಾಥಮಿಕ ಶಾಲೆಯ 14 ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ 7ನೇ ತರಗತಿಯ ಸಾಕ್ಷಿ ಶೆಟ್ಟಿ ಗುಂಡು ಎಸೆತ ಮತ್ತು ಚಕ್ರ ಎಸೆತದಲ್ಲಿ ವೃತ್ತಮಟ್ಟ ಹಾಗೂ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆಯುವುದರೊಂದಿಗೆ ವೈಯಕ್ತಿಕ ಚಾಂಪಿಯನ್ ಶಿಪ್ ತಮ್ಮದಾಗಿಸಿಕೊಂಡು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ಅಲ್ಲಿಯೂ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನಿಯಾಗಿ, ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಗೊಂಡು ಚತುರ್ಥ ಸ್ಥಾನಿಯಾಗಿ ಹೊರಹೊಮ್ಮಿರುತ್ತಾರೆ.



**ಚದುರಂಗ :** ಉಡುಪಿಯಲ್ಲಿ ಜರುಗಿದ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಯ 14 ವರ್ಷ ವಯೋಮಿತಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಸಂಸ್ಥೆಯ **ಎಸ್.ಆರ್. ಸುಮುಖ** ಪ್ರಶಸ್ತಿ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಗೊಂಡಿರುತ್ತಾರೆ.

### ಜಿಲ್ಲಾ ಮಟ್ಟಕ್ಕೆ ಆಯ್ಕೆ

#### ಪ್ರೌಢ ಶಾಲಾ ವಿಭಾಗ



**ತ್ರಿವಿಧ ಜಿಗಿತ :** ಪ್ರೌಢಶಾಲೆಯ 17ರ ವರ್ಷ ವಯೋಮಿತಿಯ ಬಾಲಕರ ವಿಭಾಗದಲ್ಲಿ 10ನೇ ತರಗತಿಯ **ಹರ್ಷಿತ್ ಶೆಟ್ಟಿ** ತಾಲೂಕು ಮಟ್ಟದ ಕ್ರೀಡಾ ಕೂಟದ ತ್ರಿವಿಧ ಜಿಗಿತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



**ಓಟದ ಸ್ಪರ್ಧೆ :** ಪ್ರೌಢಶಾಲೆಯ 17ರ ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ 10ನೇ ತರಗತಿಯ **ಕು.ಹರ್ಷಿಕಾ,** ತಾಲೂಕು ಮಟ್ಟದ ಕ್ರೀಡಾ ಕೂಟದ 200ಮೀ. ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, 100ಮೀ. ಓಟದಲ್ಲಿ ದ್ವಿತೀಯ ಮತ್ತು 4*100 ಮೀ ರಿಲೆಯಲ್ಲಿ ತೃತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



**ಕುಸ್ತಿ :** ಪ್ರೌಢಶಾಲೆಯ 17 ವರ್ಷ ವಯೋಮಿತಿಯ ಬಾಲಕರ 60 ಕೆ.ಜಿ. ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ 9ನೇ ತರಗತಿಯ **ನಿಶಾಂತ್** ಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

#### ಪ್ರಾಥಮಿಕ ಶಾಲಾ ವಿಭಾಗ



**ಓಟದ ಸ್ಪರ್ಧೆ:** ಪ್ರಾಥಮಿಕ ಶಾಲೆಯ 14ರ ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ 7ನೇ ತರಗತಿಯ **ಆಪ್ತ ಜೈನ್,** ವೃತ್ತಮಟ್ಟದ ಕ್ರೀಡಾ ಕೂಟದ 200ಮೀ. ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ 4x100 ಮೀ ರಿಲೆಯಲ್ಲಿ ದ್ವಿತೀಯ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿ, ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ 200 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



**ಉದ್ದಜಿಗಿತ:** ಪ್ರಾಥಮಿಕ ಶಾಲೆಯ 14ರ ವರ್ಷ ವಯೋಮಿತಿಯ ಬಾಲಕರ ವಿಭಾಗದಲ್ಲಿ 7ನೇ ತರಗತಿಯ ವೃತ್ತಮಟ್ಟದ ಕ್ರೀಡಾ ಕೂಟದ 100 ಮೀ. ಮತ್ತು 200ಮೀ. ಓಟದಲ್ಲಿ ಪ್ರಥಮ ಸ್ಥಾನ, ಉದ್ದಜಿಗಿತದಲ್ಲಿ ದ್ವಿತೀಯ ಸ್ಥಾನ ಹಾಗೂ 4x100 ಮೀ ರಿಲೆಯಲ್ಲಿ ತೃತೀಯ ಸ್ಥಾನ ಪಡೆದು ಬಾಲಕರ ವಿಭಾಗದ ವೈಯಕ್ತಿಕ ಚಾಂಪಿಯನ್ ಆಗಿ ತಾಲೂಕು ಮಟ್ಟಕ್ಕೆ ಆಯ್ಕೆಗೊಂಡು, ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ 200 ಮೀ. ಓಟದಲ್ಲಿ ದ್ವಿತೀಯ ಸ್ಥಾನ, 100ಮೀ. ಓಟದಲ್ಲಿ ತೃತೀಯ ಸ್ಥಾನ, ಉದ್ದ ಜಿಗಿತದಲ್ಲಿ ತೃತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

### ತಾಲೂಕು ಮಟ್ಟ – ಪ್ರಾಥಮಿಕ ಶಾಲಾ ವಿಭಾಗ



**ಉದ್ದಜಿಗಿತ :** ಪ್ರಾಥಮಿಕ ಶಾಲೆಯ 14ರ ವರ್ಷ ವಯೋಮಿತಿಯ ಬಾಲಕರ ವಿಭಾಗದಲ್ಲಿ 7ನೇ ತರಗತಿಯ **ಮಹಮ್ಮದ್ ಮುಫೈಜ್ ನಾಜ್ಜಿರ್** ವೃತ್ತಮಟ್ಟದ ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಪಡೆದು ಹಾಗೂ 4*100 ಮೀ. ರಿಲೇ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಗೊಂಡಿರುತ್ತಾರೆ.



**ಗುಂಡು ಎಸೆತ:** 14ರ ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ 8ನೇ ತರಗತಿಯ **ತನ್ಮಯೀ ಡಿ. ಅಮೀನ್** ತಾಲೂಕು ಮಟ್ಟದ ಕ್ರೀಡಾ ಕೂಟದ ಗುಂಡು ಎಸೆತದಲ್ಲಿ ತೃತೀಯ ಸ್ಥಾನಿಯಾಗಿದ್ದಾರೆ.



**ಗುಂಡು ಎಸೆತ :** ಪ್ರಾಥಮಿಕ ಶಾಲೆಯ 14ರ ವರ್ಷ ವಯೋಮಿತಿಯ ಬಾಲಕರ ವಿಭಾಗದಲ್ಲಿ 7ನೇ ತರಗತಿಯ **ಭವಿಷ್ ನಾಯಕ್,** ವೃತ್ತ ಮಟ್ಟದ ಗುಂಡು ಎಸೆತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು, ತಾಲೂಕು ಮಟ್ಟಕ್ಕೆ ಆಯ್ಕೆಯಾಗಿ, ಅಲ್ಲಿಯೂ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.

### ತಾಲೂಕು ಮಟ್ಟ – ಪ್ರೌಢ ಶಾಲಾ ವಿಭಾಗ



**ಮೈಥಿಲಿ ಪ್ರಭು**
**9ನೇ ತರಗತಿ**



**ತ್ರಿಶಾ ಶೆಟ್ಟಿ**
**9ನೇ ತರಗತಿ**



**ರೋಶ್ವಿತಾ**
**9ನೇ ತರಗತಿ**



**ಹರ್ಷಿಕಾ**
**10ನೇ ತರಗತಿ**

ರಿಲೇ: ಪ್ರೌಢಶಾಲಾ 17ರ ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ **ಮೈಥಿಲಿ ಪ್ರಭು, ತ್ರಿಷಾ, ರೋಶ್ವಿತಾ, ಹರ್ಷಿಕಾ** ತಾಲೂಕು ಮಟ್ಟದ 4x100ಮೀ ರಿಲೇಯಲ್ಲಿ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.



ಜಾವೆಲಿನ್ : ಪ್ರೌಢಶಾಲೆಯ 17 ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ 9ನೇ ತರಗತಿಯ **ಕು.ಕನ್ನಿಕಾ** ತಾಲೂಕು ಮಟ್ಟದ ಕ್ರೀಡಾ ಕೂಟದ ಜಾವೆಲಿನ್ ಎಸೆತದಲ್ಲಿ ತೃತೀಯ ಸ್ಥಾನಿಯಾಗಿದ್ದಾರೆ.



ಎತ್ತರ ಜಿಗಿತ : ಪ್ರೌಢಶಾಲೆಯ 17 ವರ್ಷ ವಯೋಮಿತಿಯ ಬಾಲಕರ ವಿಭಾಗದಲ್ಲಿ 10ನೇ ತರಗತಿಯ **ಶ್ರೀತನ್ ಶೆಟ್ಟಿ** ತಾಲೂಕು ಮಟ್ಟದ ಕ್ರೀಡಾ ಕೂಟದ ಎತ್ತರ ಜಿಗಿತದಲ್ಲಿ ತೃತೀಯ ಸ್ಥಾನಿಯಾಗಿದ್ದಾರೆ.